

ತಪ್ಪಿನ ಅರ್ಥ ಮಾಡಿಕೊಳ್ಳದೇ, ತಿದ್ದಿಕೊಳ್ಳುವ ಮನಸ್ಸು ಮಾಡದೇ ಮತ್ತು ಪರಿವರ್ತನೆಗೆ ಮುಂದಾಗುತ್ತಿಲ್ಲ? ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ನೀರಾವರಿ ವಿಚಾರವಾಗಿ ಹೋರಾಟಗಳನ್ನು ಮಾಡುತ್ತಿರುವವರಿಗೆ ಜನತೆಯಿಂದ ವ್ಯಾಪಕ ಬೆಂಬಲ ದೊರೆಯಬೇಕಿತ್ತು ಆದರೆ ದೊರೆಯುತ್ತಿಲ್ಲ, ನೀರು ಮತ್ತು ಕೆರೆಗಳನ್ನು ಆಧ್ಯಾತ್ಮಿಕ ತಳಹದಿಯ ಮೂಲಕ ಜನರಲ್ಲಿ ದೈವಾಂಶವನ್ನು ತುಂಬಿಸಿ ಶ್ರದ್ಧೆ ಗೌರವಗಳನ್ನು ನಿರ್ಮಿಸಬೇಕಾಗಿದೆ. ಇಲ್ಲದೆ ಇದ್ದರೆ ಯಾವ ನದಿಯ ಸಮುದ್ರದ ನೀರನ್ನು ತಂದುಕೊಟ್ಟರೂ ಅದನ್ನು ಒಂದಲ್ಲ ಒಂದು ದಿನ ತನ್ನ ಸ್ವಾರ್ಥ ಸಾಧನೆಗೆ ನಾಶ ಮಾಡುವುದು ಖಚಿತ.

## ವಾಸ್ತವ (ಸಂಘರ್ಷ)

ನಾನು ಮತ್ತು ಸ್ನೇಹಿತರು ನಮ್ಮ ಗ್ರಾಮದ ಎರಡು ಕೆರೆಗಳಾದ ಹುಳದೇನಹಳ್ಳಿ ಮತ್ತು ತಿಮ್ಮನಾಯಕನಹಳ್ಳಿ ಕೆರೆಗಳನ್ನು ಶಾಶ್ವತವಾಗಿ ಸಂರಕ್ಷಿಸಿ ಅಭಿವೃದ್ಧಿಪಡಿಸಿ ಯೋಚಿಸಿದೆವು. ನೀರಾವರಿ ಸಮಸ್ಯೆಯನ್ನು ಶಾಶ್ವತವಾಗಿ ನಿವಾರಿಸಲು ಮೇಲೆ ತಿಳಿಸಿದ ಅಂತರಾಳದೊಂದಿಗೆ ಗ್ರಾಮದ ಸಾಮಾಜಿಕ ಕಾರ್ಯಕರ್ತ ಹೆಚ್.ವಿ.ರಾಮಕೃಷ್ಣಗೌಡರು ಮತ್ತು ಕೋಲಾರದ ಹೊಳಲಿ ಪ್ರಕಾಶ್ ರವರ ಮಾರ್ಗದರ್ಶನದೊಂದಿಗೆ ಪ್ರಯತ್ನಿಸುತ್ತಿದ್ದೇವೆ. ಈ ಪ್ರಯತ್ನದಲ್ಲಿ ನಡೆದಂತಹ ಘಟನೆಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ.

ಕಳೆದ ಕೆಲವು ವರ್ಷಗಳಿಂದ ಈ ಎರಡು ಕೆರೆ ಮತ್ತು ರಾಜ ಕಾಲುವೆಗಳಲ್ಲಿ ಮರಳು ಮಾಫಿಯಾ ನಡೆಯುತ್ತಿದ್ದು ಜೊತೆಗೆ ಒತ್ತುವರಿಯೂ ಆಗಿದೆ. ಇದನ್ನು ತಡೆಗಟ್ಟಲು ಕಳೆದ ಎರಡು ವರ್ಷಗಳಿಂದ ಗ್ರಾಮ ಪಂಚಾಯಿತಿ ಅಧ್ಯಕ್ಷರಿಂದ ಮುಖ್ಯ ಕಾರ್ಯದರ್ಶಿಗಳವರೆಗೆ, ಪೋಲಿಸ್ ಮತ್ತು ಸಂಬಂಧಪಟ್ಟ ಇಲಾಖೆಗಳಿಗೆ ಮನವಿ ಪತ್ರಗಳನ್ನು ನೀಡಿದರೂ ಪ್ರಯೋಜನವಾಗಲಿಲ್ಲ, ಸರ್ಕಾರಿ ಅಧಿಕಾರಿಗಳನ್ನು ಕೇಳಿದರೆ ಉದಾಸೀನದ ಮಾತುಗಳು, ನನ್ನ ಕೈಯಲ್ಲಿ ಸಾಧ್ಯವಾಗುತ್ತಿಲ್ಲ, ಇದು ನಮಗೆ ಸಂಬಂಧಪಟ್ಟಿದ್ದಲ್ಲ ಎಂಬುವ ಅಸಹಾಯಕ, ಉತ್ತರಗಳು ಬಂದವು. ಪೋಲಿಸ್ ಇಲಾಖೆ ದೂರು ನೀಡಿದರೆ ದೂರು ಪಡೆದವರೇ ಮರಳು ಮಾಫಿಯಾದವರಿಗೆ ಮುನ್ಸೂಚನೆ ನೀಡಿ ಅವರು ಬರುವ ವೇಳೆಗೆ ದಂಧೆಕೋರರು ಪರಾರಿಯಾಗುವಂತೆ ಮಾಡುತ್ತಿದ್ದರು. ಮರಳು ಮಾಫಿಯಾದಿಂದ ಯಾವ ರೀತಿ ಅಪರಾಧ ಚಟುವಟಿಕೆಗಳು ಗಲಾಟೆಗಳು ಸೃಷ್ಠಿಯಾಗುತ್ತಿವೆ ಎಂಬುದನ್ನು ಬಿಡಿಸಿ ಹೇಳಿದರೂ ಯಾವುದೇ ಪ್ರಯೋಜನವಾಗಲಿಲ್ಲ, ಕೊನೆಗೆ ಹುಳದೇನಹಳ್ಳಿಯ ಗ್ರಾಮಸ್ಥರನ್ನು, ಹಿರಿಯರನ್ನು ಸೇರಿಸಿ ಕೆರೆಗಳಲ್ಲಿ ಅಕ್ರಮ ಚಟುವಟಿಕೆಗಳು ನಡೆಯಬಾರದೆಂದು ತೀರ್ಮಾನ ತೆಗೆದುಕೊಂಡರೂ ಜಾತೀಯತೆಯಿಂದಾಗಿ ಕಡಿವಾಣ ಅಸಾಧ್ಯವಾಯಿತು. ನಮ್ಮ ಪಕ್ಕದ ಗ್ರಾಮ ಕೂರ್ನಹೊಸಹಳ್ಳಿಯ ಒಬ್ಬ ವ್ಯಕ್ತಿಯ ಜಮೀನು ಕೆರೆ ಕೊನೆಯಲ್ಲಿದೆ, ಅದು ಯಾರಿಗೂ ಕಾಣಿಸುವುದಿಲ್ಲ, ಸದರಿ ವ್ಯಕ್ತಿ ಅಕ್ರಮ ಫಿಲ್ಟರ್ ಮರಳು ದಂಧೆ ನಡೆಸುತ್ತಿದ್ದಾನೆ. ಅವನನ್ನು ತಡೆದು ಮನವರಿಕೆ ಮಾಡಿದ್ದರೂ ದಂಧೆ ಸುಲಲಿತವಾಗಿ ನಡೆಸುತ್ತಿದ್ದಾನೆ.

ಇವುಗಳಿಂದ ಬೇಸತ್ತು ನಾವುಗಳೇ ನೇರವಾಗಿ ದಂಧೆಯನ್ನು ತಡೆಯಲು ಮುಂದಾದಾಗ ಶುರುವಾಗಿದ್ದು, ಘರ್ಷಣಾ ಅಧ್ಯಾಯ. ಹಳ್ಳಿಯ ಮರಳು ದಂಧೆ ಮಾಡುತ್ತಿದ್ದವರು, ನಮ್ಮ ಮೇಲೆ ಅವಾಚ್ಯ ಶಬ್ದಗಳಿಂದ ಬೈಯುತ್ತಾ ಗಲಾಟೆ ಮಾಡಿದಾಗ ಅವರಿಗೆ ಸಮರ್ಥವಾದ ಪ್ರತಿರೋಧ ಕೊಟ್ಟೆವು. ಇದರ ಪರಿಣಾಮ ಸ್ವಲ್ಪ ದಿನಗಳ ಮಟ್ಟಿಗೆ ದಂಧೆಗೆ ಕಡಿವಾಣ ಬಿದ್ದಿತು. ಆದರೆ ಅವರುಗಳು ಹಳ್ಳಿಯಲ್ಲಿನ ಅಪರಾಧ ಹಿನ್ನಲೆ ಹಾಗೂ ಗೂಂಡಾ ಮಾನಿಸಕತೆಯಿರುವವರನ್ನು ನಮ್ಮ ಮೇಲೆ ಛೂ ಬಿಟ್ಟು ಹತ್ತಾರು ಬಾರಿ ಹಲ್ಲೆ ಮಾಡಿಸಿದರು. ಹೀಗೆ ಹಲ್ಲೆ ಮಾಡಿದಾಗಲೆಲ್ಲಾ ಪೋಲೀಸ್ ಠಾಣೆಯಲ್ಲಿ ದೂರು ನೀಡಿದರೂ ಪುಡಿ ರಾಜಕಾರಣಿಗಳು ಅವರ ಪರವಾಗಿ ನಿಂತುಕೊಂಡು ರಾಜಿ ಸಂಧಾನ ಮಾಡಿಸಿದರು. ಇಲ್ಲಸಲ್ಲದ ಆರೋಪಗಳನ್ನು ಶಾಸಕರ ಬಳಿ ಹೇಳಿ ಪೋಲಿಸರು ನಮ್ಮ ಮೇಲೆಯೇ ಕ್ರಮ ತೆಗೆದುಕೊಳ್ಳುವಂತೆ ಒತ್ತಡ ಹೇರಿದರು. ಆದರೆ ಸ್ಥಳಕ್ಕೆ ಬಂದ ಪೋಲಿಸರಿಗೆ ವಾಸ್ತವ ಸ್ಥಿತಿ ಕಂಡು ಹಿಂದಿರುಗಿದರು.

ಇನ್ನೂ ಮರಳು ದಂಧೆ ಮಾಡುತ್ತಿದ್ದವರನ್ನು ಯಾರಾದರೂ ಮರಳು ಕೇಳಿದರೆ ಮರಳು ಇಲ್ಲವೆಂದು ಮತ್ತು ಅದಕ್ಕೆ ಎರಡು ಪಟ್ಟು ಹೆಚ್ಚು ಹಣ ಕೇಳುವುದು, ಇದಕ್ಕೆಲ್ಲಾ ನಾನು ಮತ್ತು ನನ್ನ ಸ್ನೇಹಿತರೆ ಕಾರಣ ಎಂದು ಜನತೆಯನ್ನು ಎತ್ತಿಕಟ್ಟುವ ಕೆಲಸವನ್ನು ಮಾಡಿದರು.

ಇಷ್ಟೆಲ್ಲಾ ಪ್ರತಿರೋಧ ಬಂದರೂ ಹುಳದೇನಹಳ್ಳಿಯ ಜನರು ನಮಗೆ ಬೆಂಬಲ ನೀಡಿ 'ನಾವು ನಿಮ್ಮೊಂದಿಗಿದ್ದೇವೆ' ಹೋರಾಡಿ ಎಂದು ಸಹಕಾರ ನೀಡುತ್ತಿದ್ದಾರೆ. ಪ್ರಾಣ ಹೋದರೂ ಪರವಾಗಿಲ್ಲ ಈ ಎರಡು ಕೆರೆಗಳನ್ನು ಶಾಶ್ವತವಾಗಿ ಸಂರಕ್ಷಿಸುವ ಕೆಲಸದಿಂದ ಹಿಂದೆ ಸರಿಯುವುದು ಬೇಡ ಎನ್ನುವ ಧೈರ್ಯ ನಮ್ಮದು.

ಜಿಲ್ಲಾಧಿಕಾರಿಗಳು ಸಹಕಾರದೊಂದಿಗೆ ಈ ಎರಡು ಕೆರೆಗಳನ್ನು ಸಂರಕ್ಷಿಸುವ ಮತ್ತು ನಿರ್ವಹಿಸುವ ಉಸ್ತುವಾರಿಯನ್ನು ನೀಡುವ ಭರವಸೆಯಿತ್ತಿದ್ದಾರೆ. ಇದರ ಅನುಮತಿಗಾಗಿ ಸಣ್ಣನೀರಾವರಿ ಇಲಾಖೆಗೆ ಕಳುಹಿಸಿಕೊಟ್ಟಿದ್ದಾರೆ.

ರಾಜಕೀಯಕ್ಕಾಗಿ ಒಳ್ಳೆ ಕೆಲಸವನ್ನು ಮಾಡುತ್ತಿರುವ ಮತ್ತು ನೀರಾವರಿ ಹೋರಾಟ ಮಾಡುತ್ತಿರುವ ಸಾಮಾಜಿಕ ಕಾರ್ಯಕರ್ತರಿಗೆ ತೊಂದರೆ ಕೊಡಬಾರದು. ಮರಳು ದಂಧೆಕೋರರ ಹಾಗೂ ಕೆರೆ ಒತ್ತುವರಿ ಮಾಡಿಕೊಂಡವರ ಪರವಾಗಿ ನಿಲ್ಲಬಾರದು.

ಪೋಲಿಸರು ಸಂವಿಧಾನ ನೀಡಿರುವ ಅಧಿಕಾರ ಬಳಸಿ ತಪ್ಪು ಮಾಡಿದವರನ್ನು ದಂಡಿಸಿ ಸಜ್ಜನರಿಗೆ ನ್ಯಾಯವನ್ನು ಕೊಡಿಸಬೇಕು. ಹಣಕ್ಕಾಗಿ, ಯಾವುದೋ ಜಾತಿ ರಾಜಕೀಯ ಒತ್ತಡಕ್ಕಾಗಿ ಇಲಾಖೆಯ ಘನತೆಗೆ ಅಪಮಾನ ಮಾಡಬಾರದು. ಕೆಲಸಕ್ಕೆ ಸೇರುವ ಮುಂಚೆ ಮಾಡಿದ ಪ್ರತಿಜ್ಞೆಯನ್ನು ನೆನಪುಮಾಡಿಕೊಂಡು ಯಾವುದೇ ಲಂಚ ಆಮಿಷಗಳಿಗೆ ಬಲಿಯಾಗದ ರಾಜಕೀಯ ಒತ್ತಡಗಳಿಗೆ ಒಳಗಾಗದೆ ನಿಮಗೆ ನೀಡಿರುವ ಅಧಿಕಾರವನ್ನು ಬಳಸಿಕೊಂಡು ಸಮಾಜಕ್ಕಾಗಿ ಕೆಲಸ ಮಾಡಬೇಕಾದ್ದು ಅ ಕಾರಿಗಳ ಕರ್ತವ್ಯ.

ಕಷ್ಟಗಳು ಬಂದಾಗ ಬರೀ ಹಾದಿಬೀದಿಯಲ್ಲಿ ಬೈದುಕೊಳ್ಳದೇ ಪರಿಸರ ಮತ್ತು ನೀರಿನ ವಿಚಾರವಾಗಿ ಹೋರಾಟ ಮಾಡುವವರಿಗೆ ಸಹಕಾರ ನೀಡಿ ಭೋಗ ಜೀವನವನ್ನು ಬಿಟ್ಟು ಆಧ್ಯಾತ್ಮಿಕ ಜೀವಿಗಳಾಗಿ ಇಂದು ನಾವು ಜಾಗೃತರಾಗದಿದ್ದಲ್ಲಿ ಮುಂದಿನ ದಿನಗಳು ಅತಿ ಘೋರ ಕೆಟ್ಟ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ.

## ಕೊನೆ ಮಾತು

ಬಯಲುಸೀಮೆಗೆ ಪ್ರಕೃತಿದತ್ತವಾಗಿ ಮತ್ತು ನಮ್ಮ ಪೂರ್ವಜರು ನೀಡಿರುವ ನೀರಿನ ಮೂಲಗಳೆಂದರೆ ಕೆರೆ, ಕುಂಟೆಗಳು. ಇವುಗಳನ್ನು ಸಂರಕ್ಷಿಸಿ ಅಭಿವೃದ್ಧಿ ಪಡಿಸಿದರೆ ಶಾಶ್ವತ ನೀರಾವರಿ ವ್ಯವಸ್ಥೆ ಅನುಷ್ಠಾನವಾಗುತ್ತದೆ. ನೀರಾವರಿ ಹೋರಾಟಗಾರರು, ಕವಿಗಳು, ಬುದ್ದಿಜೀವಿಗಳು, ವಿಚಾರವಾದಿಗಳು, ಪತ್ರಕರ್ತರು, ಕನ್ನಡಪರ ಸಂಘಟನೆಗಳ ಕಾರ್ಯಕರ್ತರು, ಸ್ತ್ರೀ ಶಕ್ತಿ ಸಂಘಗಳು, ವಿವಿದ ಜಾತಿ ಸಮಾಜಿಕ ಸಂಘಸಂಸ್ಥೆಗಳು, ಪರಿಸರವಾದಿಗಳು, ನೀರಿನ ಬಗ್ಗೆ ಭಾಷಣ ಮಾಡುವವರು, ಅತಿಮುಖ್ಯವಾಗಿ ಯುವಕ ಯುವತಿಯರು ಮಾಡಲೇಬೇಕಾದ ಕಾರ್ಯವೆಂದರೆ ಕನಿಷ್ಟ ಒಂದು ಕುಂಟೆ ಅಥವಾ ಕೆರೆಯನ್ನು ದತ್ತು ತೆಗೆದುಕೊಂಡು ಶಾಶ್ವತವಾದ ರೀತಿಯಲ್ಲಿ ಸಂರಕ್ಷಿಸಿ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳಬೇಕು. ಹಾಗಾದಾಗ ಮಾತ್ರ ನೀರಾವರಿ ಸಮಸ್ಯೆಯನ್ನು ಶಾಶ್ವತವಾಗಿ ಪರಿಹಾರ ಮಾಡಲು ಸಾಧ್ಯ.